ಕರ್ನಾಟಕ ಸರ್ಕಾರ

# ವಿಶೇಷ ನೇಮಕಾತಿ ಸಮಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,

ಆನಂದರಾವ್ ವೃತ್ತ, ಬೆಂಗಳೂರು-560 009

ಸಂಖ್ಯೆ: ಎಸ್ಆರ್‌ಸಿ/01-ಜಿ/2017-18 (ಡಯಟಿಷಿಯನ್) ದಿನಾಂಕ: 26.02.2018

## -:ಅಧಿಸೂಚನೆ:-

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಡಯಟಿಷಿಯನ್ ಹುದ್ದೆಗೆ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 149 ಸೆನೆನಿ 2010 ದಿನಾಂಕ 18.10.2010
2. ಸರ್ಕಾರಿ ಸುತ್ತೋಲೆ ಸಂಖ್ಯೆ ಸಿಆಸುಇ 78 ಹೈಕಕೋ 2014, ದಿನಾಂಕ 16.11.2016
3. ಸರ್ಕಾರಿ ಅಧಿಸೂಚನೆ ಸಂಖ್ಯೆ:ಹೆಚ್ಎಫ್‌ಡಬ್ಲ್ಯೂ/21/ಹೆಚ್ಎಸ್ಎಂ/2017, ದಿನಾಂಕ: 05.05.2017
4. ವಿಶೇಷ ನೇಮಕಾತಿ ಸಮಿತಿ ಅಧಿಸೂಚನೆ ಸಂಖ್ಯೆ:ಎಸ್ಆರ್‌ಸಿ/01/2017-18, ದಿನಾಂಕ 30.05.2017
5. ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ ಎಸ್.ಆರ್.ಸಿ/01-ಜಿ/2017-18 ದಿನಾಂಕ 22.01.2018
6. ಆಯುಕ್ತರ ಅನುಮೋದನೆ ದಿನಾಂಕ 23.02.2018

---***---

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್ಆರ್‌ಸಿ/01/2017-18 ದಿನಾಂಕ 30.05.2017 ರಲ್ಲಿ ವಿವಿಧ ಅರೆ ವೈದ್ಯಕೀಯ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಮೀಸಲಾತಿ ಮತ್ತು ಶೇಕಡವಾರು ಅಂಕಗಳ ಆಧಾರದ ಮೇಲೆ **ಡಯಟಿಷಿಯನ್** ಹುದ್ದೆಯ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖ (2) ರ ನಿಯಮಗಳಂತೆ ಪರಿಶೀಲಿಸಿ ಉಲ್ಲೇಖ (5) ರಲ್ಲಿ ಪ್ರಕಟಿಸಿದ್ದು, ಸ್ವೀಕರಿಸಿರುವ ಆಕ್ಷೇಪಣೆಗಳಲ್ಲಿ ಯಾವುದೇ ಪೂರಕ ಅಂಶವಿಲ್ಲದ ಕಾರಣ ವಿಶೇಷ ನೇಮಕಾತಿ ಸಮಿತಿಯ ತೀರ್ಮಾನದಂತೆ ಈ ಕೆಳಕಂಡಂತೆ ಅಂತಿಮ ಆಯ್ಕೆಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

## ರಾಜ್ಯ ವೃಂದದ ಅಂತಿಮ ಆಯ್ಕೆಪಟ್ಟಿ

| Sl No | Appliction ID | Name | DOB | Gender | Percentage | Selected Category |
|---|---|---|---|---|---|---|
| 1 | DE7000087 | SUDHA SAMBRANI | 02-11-1991 | Female | **90.06** | GM_W |
| 2 | DE7000252 | VIJAYALAXMI C LAXMESHWAR | 27-04-1991 | Female | **89.70** | GM_G |
| 3 | DE7000328 | SHARADABAI MOTU RATHOD | 01-03-1995 | Female | **85.80** | SC_G |
| 4 | DE7000211 | SHILPA B | 18-07-1987 | Female | **84.97** | ST_G |
| 5 | DE7000421 | LATHAMANI K M | 29-04-1995 | Female | **83.60** | CAT1_G |

## ಹೈದರಾಬಾದ್-ಕರ್ನಾಟಕ ವೃಂದದ ಅಂತಿಮ ಆಯ್ಕೆಪಟ್ಟಿ

| Sl No | Appliction ID | Name | DOB | Gender | Percentage | Selected Category |
|---|---|---|---|---|---|---|
| 1 | DE7000399 | M JAYASREE | 23-04-1995 | Female | **85.80** | GM_G |

**ಈ ಅಂತಿಮ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳ ಆಯ್ಕೆಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಈ ಅಂತಿಮ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಸೇರಿಸಿರುವ ಕಾರಣದಿಂದಾಗಿಯೇ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.
2. ಈ ಆಯ್ಕೆಯು ಅಭ್ಯರ್ಥಿಗಳು ಸಲ್ಲಿಸಿರುವ ಅಂಕ ಪಟ್ಟಿಗಳನ್ನು/ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳಿಗೆ ನೈಜತೆ ಪರಿಶೀಲನೆಗೆ ಒಳಪಡಿಸಿ ಅವರು ನೀಡಲಾಗುವ ಅಭಿಪ್ರಾಯಕ್ಕೆ ಒಳಪಟ್ಟಿರುತ್ತದೆ. ಯಾವುದೇ ಅಭ್ಯರ್ಥಿಯು ಸಲ್ಲಿಸಿರುವ ಅಂಕಪಟ್ಟಿಗಳ/ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸ್ವೀಕೃತವಾದಲ್ಲಿ, ಅಂತಹ ಅಭ್ಯರ್ಥಿಯ ಆಯ್ಕೆಯನ್ನು ಪುನರ್ ಪರಿಶೀಲಿಸಿ ಯಾವುದೇ ಸೂಚನೆ ನೀಡದಂತೆ ರದ್ದುಗೊಳಿಸಲಾಗುವುದು.
3. ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಪೋಲೀಸ್ ಪೂರ್ವಾಪರ ವರದಿ, ಜಾತಿ ಸಿಂಧುತ್ವ ಮತ್ತು ಹೈ-ಕ ಸಿಂಧುತ್ವ ವರದಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಸ್ವೀಕೃತವಾದ ನಂತರವೇ ನೇಮಕಾತಿ ಆದೇಶ ನೀಡುವ ಷರತ್ತಿಗೊಳಪಟ್ಟಿರುತ್ತದೆ
4. ಯಾವುದೇ ಅಭ್ಯರ್ಥಿಯು ಆಯ್ಕೆಗೆ ಅನರ್ಹ ಎಂದು ಕಂಡುಬಂದಲ್ಲಿ, ಆಯ್ಕೆ ಸಮಿತಿಯು ಅಂತಹ ಅಭ್ಯರ್ಥಿಯ ಅರ್ಜಿಯನ್ನು ಪುನರ್ ಪರಿಶೀಲಿಸಿ ತಿರಸ್ಕರಿಸುವ ಹಕ್ಕು ಹೊಂದಿರುತ್ತದೆ.
5. ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಹೂಡಲಾಗಿರುವ ಹಾಗೂ ನ್ಯಾಯಾಲಯದಲ್ಲಿ ಹೂಡಲಾಗುವ ಪ್ರಕರಣಗಳ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಸದಸ್ಯ ಕಾರ್ಯದರ್ಶಿ,
ವಿಶೇಷ ನೇಮಕಾತಿ ಸಮಿತಿ ಹಾಗೂ
ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕು.ಕ.ಸೇವೆಗಳು.